# "ಅದ್ಕೆ ಹೀಗಿರೋದು"

**ಒ**ಮ್ಮೆ ಮಹಾರಾಜರೊಬ್ಬರು ತೀರ್ಥಯಾತ್ರೆ ಕೈಗೊಳ್ಳುತ್ತಾರೆಂಬ ಸುದ್ದಿ ಹರಡಿತು. ಅವರು ಹೋಗುವ ಮಾರ್ಗದ ಸುತ್ತಮುತ್ತಲ ಹಳ್ಳಿಯ ಜನರೆಲ್ಲಾ, ಮಹಾರಾಜರ ದರ್ಶನಕ್ಕಾಗಿ ಬಂದು ನೆರೆದರು. ಅವರ ಸ್ವಾಗತಕ್ಕಾಗಿ ರಸ್ತೆಗಳನ್ನು ಸ್ವಚ್ಛಗೊಳಿಸಿ ತಳಿರುತೋರಣಗಳಿಂದ ಸಿಂಗರಿಸಿದರು. ಎಲ್ಲಾ ಅಧಿಕಾರಿ ವರ್ಗದವರೂ ಮೂರು ದಿನ ಮುಂಚೆಯೇ ಬಂದು ಸಕಲ ಏರ್ಪಾಟುಗಳನ್ನೂ ಮಾಡಿಕೊಂಡು ಕಾಯುತ್ತಾ ಕುಳಿತರು. ಇದ್ದಕ್ಕಿದ್ದಂತೆ ಸಾಧುವೊಬ್ಬರು ಸಿಂಗಾರಗೊಂಡಿದ್ದ ರಸ್ತೆಯ ಮಧ್ಯದಲ್ಲಿ ಬಂದು ಕುಳಿತರು. ಇದನ್ನು ನೋಡಿದ ಜನ ಊರ ಪಟೇಲರಲ್ಲಿ ದೂರಿದರು. ಪಟೇಲರು ಕುಳವಾಡಿಯನ್ನು ಕರೆದು ಸಾಧುವನ್ನು ಆಚೆ ಕಳಿಸುವಂತೆ ತಿಳಿಸಿದರು. ಕುಳವಾಡಿ ಬಂದವನೇ, "ಯಾರ್ಲ ಅಲ್ಲಿ ಕುಳಿತಿರೋನು? ಮಹಾದೊಡ್ಡ ಮನುಷ್ಯಾಗೆ ಬಂದು ಕುಳತವ್ನೆ. ಏಳಲೇ ಮೇಲೆ. ಇಲ್ದೆವೋದ್ರೆ ಒದ್ದು ಯಳ್ದುಹಾಕ್ತೀನಿ ನೋಡು" ಎಂದ. ಸಾಧುಗಳು ಸ್ವಲ್ಪವೂ ವಿಚಲಿತರಾಗದೆ, ಶಾಂತಮನಸ್ಸಿನಿಂದ, **"ಅದ್ಕೆ ಹೀಗಿರೋದು"** ಎಂದರು. ಕುಳವಾಡಿಗೆ, "ನಾನು ಬೈದ್ರೂ ಈ ಮನುಷ್ಯ ತುಂಬಾ ಶಾಂತವಾಗಿ ಏನೊ ಹೇಳ್ತ ಅವ್ನಲ್ಲಾ; ಏನು ಮಾಡೋದು ಎಂದು ತಿಳಿತಿಲ್ಲ" ಎಂದು ಆಶ್ಚರ್ಯವಾಯ್ತು. ಅವನು ಪಟೇಲರ ಬಳಿ ಬಂದು, "ಸ್ವಾಮಿ ಅವ್ನು ಏಳೊಲ್ಲ. ಅದೇನೋ ಗೊಣಗತಾ ಅವ್ನೆ. ನನ್ಗೆ ತಿಳಿಯಾಕಿಲ್ಲ. ನೀವೇ ಬಂದು ಹೇಳಿ" ಅಂದ. ಪಟೇಲರು ಬಳಿ ಬಂದು "ಯಾರೋ ಅವ್ನು ಅಲ್ಲಿ ಕುಳಿತಿರೋನು. ಮಹಾರಾಜರು ಬರ್ತಾ ಅವ್ರೆ ಅಂದ್ರೆ ಇಲ್ಲಿ ಬಂದು ಕುಳಿತವ್ನೆ. ಏಳ್ತಿಯೋ ಅಥವಾ ಕುಳವಾಡಿ ಕೈಲಿ ಎಳಿಸಾಕ್ಲೊ" ಅಂದರು. ಈಗಲೂ ಸಾಧುಗಳು ಶಾಂತವಾಗಿ, **"ಅದ್ಕೆ ಹೀಗಿರೋದು"** ಎಂದರು.



ಪಟೇಲರಿಗೂ ಏನೂ ತಿಳಿಲಿಲ್ಲ. ಅವರು ಶಾನುಭೋಗರಿಗೆ ಹೇಳಿದರು. ಶ್ಯಾನುಭೋಗರು ಬಂದು, "ಏಳಯ್ಯಾ ಮೇಲೆ. ನಿನ್ಗೆ ಹೇಳೋದು ಗೊತ್ತಾಗೊದಿಲ್ವೆ. ಮಹಾರಾಜರು ಬರ್ತಾ ಇದಾರೆ. ಏಳು ಮೇಲೆ. ಏಳ್ದೆ ಇದ್ರೆ ಎಳಿಸಿಹಾಕ್ತೀನಿ" ಅಂದರು. ಆಗಲೂ ಸಾಧುಗಳು **"ಅದ್ಕೆ ಹೀಗಿರೋದು"** ಅಂದ್ರು. ಶ್ಯಾನುಭೋಗರಿಗೂ ಏನು ಮಾಡಬೇಕು ಎಂಬುದು ತಿಳಿಯಲಿಲ್ಲ. ಅವರು ಶೇಕ್‌ದಾರರಿಗೆ ಹೇಳಿದರು. ಶೇಕ್‌ದಾರರು ಬಂದು, "ಏಳ್ರೀ ಮೇಲೆ, ಹೇಳೋದು ತಿಳಿಯೋದಿಲ್ವೆ ಮಹಾರಾಜರು ಬರ್ತಾ ಇದಾರೆ. ಏಳ್ರೀ ಮೇಲೆ" ಎಂದರು. ಆಗಲೂ ಸಾಧುಗಳು ಶಾಂತ ಚಿತ್ತದಿಂದಲೇ **"ಅದ್ಕೆ ಹೀಗಿರೋದು"** ಅಂದರು. ಶೇಕ್‌ದಾರರಿಗೂ ಅರ್ಥವಾಗಲಿಲ್ಲ. ಅವರು ಅಮಲ್ದಾರರಿಗೆ ಹೇಳಿದರು. ಅಮಲ್ದಾರರು ಬಂದು, "ಏಳಪ್ಪಾ ಮೇಲೆ. ಮಹಾರಾಜರು ಬರ್ತಾ ಇದಾರೆ. ನೀನು ಮಧ್ಯೆ ಕುಳಿತರೆ ಹೇಗೆ? ಏಳು ಮೇಲೆ. ಏಳ್ದೆ ಹೋದ್ರೆ ಬಲವಂತವಾಗಿ ಎತ್ತಿಸಿ ಹೊರಗೆ ಹಾಕಬೇಕಾಗುತ್ತೆ" ಅಂದರು. ಆಗಲೂ ಸಾಧುಗಳು, **"ಅದ್ಕೆ ಹೀಗಿರೋದು"** ಎಂದರು. ಅಮಲ್ದಾರರಿಗೂ ಮುಂದೆ ಏನು ಮಾಡಬೇಕು ತಿಳಿಲಿಲ್ಲ. ಅವರು ಜಿಲ್ಲಾಧಿಕಾರಿಗಳಿಗೆ ತಿಳಿಸಿದರು. ಜಿಲ್ಲಾಧಿಕಾರಿಗಳು ಬಂದು, "ಏಳಿ ಸ್ವಾಮಿ. ತಾವು ಮಧ್ಯೆ ಕುಳಿತರೆ ತೊಂದರೆಯಾಗುತ್ತೆ. ಮಹಾರಾಜರು ಬರ್ತಾ ಇದಾರೆ. ದಯವಿಟ್ಟು ಏಳಿ" ಅಂದರು. ಅವರಿಗೂ ಸಾಧುಗಳು, **"ಅದ್ಕೆ ಹೀಗಿರೋದು"** ಅಂದರು. ಜಿಲ್ಲಾಧಿಕಾರಿಗಳಿಗೂ ಮುಂದೆ ಏನು ಮಾಡಬೇಕು ಎಂದು ತಿಳಿಯಲಿಲ್ಲ. ಅಷ್ಟರಲ್ಲಿ ಮಹಾರಾಜರೇ ಅಲ್ಲಿಗೆ ಬಂದರು. ಮಹಾರಾಜರು ಸಾಧುಗಳನ್ನು ನೋಡಿದ ತಕ್ಷಣ ಕೈಮುಗಿದುಕೊಂಡು ಬಂದು ಪ್ರದಕ್ಷಿಣೆ ಮಾಡಿ, ದೀರ್ಘದಂಡ ನಮಸ್ಕಾರ ಮಾಡಿ, ನಮ್ರತೆಯಿಂದ, "ಮಹಾಸ್ವಾಮಿ, ತಮ್ಮ ದರ್ಶನದಿಂದ ಪುನೀತನಾದೆ, ನನ್ನಿಂದ ಏನಾಗಬೇಕೆಂದು ದಯವಿಟ್ಟು ಅಪ್ಪಣೆ ಮಾಡಿದ್ರೆ ಶಿರಸಾವಹಿಸಿ ಮಾಡಿಕೊಡ್ತೇನೆ" ಎಂದರು. ಆಗಲೂ ಸಾಧುಗಳು, **"ಅದ್ಕೆ ಹೀಗಿರೋದು"** ಅಂದರು. ಮಹಾರಾಜರಿಗೂ ಇದರರ್ಥವೇನು ಎಂದು ತಿಳಿಯಲಿಲ್ಲ. ಮಹಾರಾಜರೇ ಮತ್ತೆ ವಿನಯದಿಂದ, "ಮಹಾಸ್ವಾಮಿ, ಇದರ ಅರ್ಥ ನನಗೆ ತಿಳಿಯಲಿಲ್ಲ. ದಯವಿಟ್ಟು ತಿಳಿಸಿಕೊಡಬೇಕು" ಎಂದು ಪ್ರಾರ್ಥಿಸಿಕೊಂಡರು. ಆಗ ಸಾಧುಗಳು, ಕುಳವಾಡಿಯಿಂದ ಮಹಾರಾಜರವರೆಗೆ ಅವರು ನಡೆದುಕೊಂಡ ರೀತಿ, ಬಳಸಿದ ಭಾಷೆ ಎಲ್ಲವನ್ನೂ ವಿವರಿಸಿ, ಮನುಷ್ಯನ ನಡವಳಿಕೆಗಳು, ಅವನು ಬಳಸುವ ಭಾಷೆ, ಅವನ ಸ್ಥಾನಮಾನಗಳು ಎಲ್ಲವೂ ಅವನ ಸಂಸ್ಕಾರಕ್ಕೆ ತಕ್ಕಂತೆ ಇರುತ್ತವೆ. ಅದಕ್ಕೆ ಇಂದಿನ ಘಟನೆಯೊಂದು ಉತ್ತಮ ನಿದರ್ಶನ ಎಂದು ಹೇಳಿ, ಜನರ ಮಧ್ಯೆ ಮಿಂಚಂತೆ ಮರೆಯಾದರು! **ನಮ್ಮ ಮಾತು ನಮ್ಮ ಅಂತರಂಗದ ಕನ್ನಡಿ.**

(ಕಥೆ: **ಡಿ.ಕೆ. ಈರೇಗೌಡ**)